APRIL 28,2025

ALL INDIA RADIO- DHARWAD

PRADESH SAMACHARA (KANNADA) 12PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಕಳೆದ ಎರಡು ವರ್ಷಗಳಲ್ಲಿ, ಪಂಚ ಖಾತ್ರಿ ಯೋಜನೆಗಳಿಗೆ, 80 ಸಾವಿರ ಕೋಟಿ ರೂಪಾಯಿ ನೀಡಲಾಗಿದೆ; ಈ ವರ್ಷ 50 ಸಾವಿರ ಕೋಟಿ ರೂಪಾಯಿ, ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲೂಕಿನ, ಕುಂದಾಣ ಹೋಬಳಿಯಲ್ಲಿ ಆಯೋಜಿಸಿದ್ದ, ರಾಜ್ಯ ಸರ್ಕಾರದ ಎರಡು ವರ್ಷಗಳ, ಸಾಧನಾ ಸಮಾವೇಶದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಟೀಕೆಗಳಿಗೆ, ಅಭಿವೃದ್ಧಿ ಕಾರ್ಯಗಳ ಮೂಲಕ, ಸಮರ್ಥವಾಗಿ ಉತ್ತರ ನೀಡಿದ್ದಾಗಿ ಹೇಳಿದ ಅವರು, ಜನ ಕಲ್ಯಾಣಕ್ಕೆ ತಮ್ಮ ಸರ್ಕಾರ ಆದ್ಯತೆ ನೀಡಿದೆ, ಎಂದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮಾತನಾಡಿ, ಸರ್ಕಾರಕ್ಕೆ ಹಲವಾರು ಸಮಸ್ಯೆಗಳು ಇದ್ದಾಗ್ಯೂ, ಜನರ ಋಣ ತೀರಿಸಲು, ಖಾತ್ರಿ ಯೋಜನೆಗಳನ್ನು, ಬದ್ಧತೆಯಿಂದ ಅನುಷ್ಠಾನಗೊಳಿಸಲಾಗಿದೆ ಎಂದರು.

<><><>

ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ 7 ನೇ ಸುತ್ತಿನ ಕಾಲು ಬಾಯಿ ರೋಗ ಲಸಿಕೆ ಹಾಗೂ ದನಗಳಿಗೆ ಚರ್ಮಗಂಟು ರೋಗದ ಲಸಿಕಾ ಕಾರ್ಯಕ್ರಮ ರಾಜ್ಯಾದ್ಯಂತ ಆರಂಭಗೊಂಡಿದೆ. ಉತ್ತರಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ತೆರಕನಹಳ್ಳಿಯಲ್ಲಿ ಶಿರಸಿ–ಸಿದ್ದಾಪುರ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಲಸಿಕಾಕರಣಕ್ಕೆ ಚಾಲನೆ ನೀಡಿದರು. ಜೂನ್ 4 ರವರೆಗೆ ಬೆಳಿಗ್ಗೆ 7 ಗಂಟೆಯಿಂದ 10 ಗಂಟೆ ವರೆಗೆ ಲಸಿಕೆದಾರರಿಂದ ಪ್ರತಿ ಮನೆಗೆ ಭೇಟಿ ನೀಡಿ, ಚರ್ಮಗಂಟು ರೋಗ ನಿಯಂತ್ರಣದ ಎಲ್‌ಎಸ್‌ಡಿ ಲಸಿಕೆಯನ್ನೂ ನೀಡಲಾಗುತ್ತಿದೆ. ಲಸಿಕಾಕರಣದ ಬಗ್ಗೆ ಉತ್ತರಕನ್ನಡ ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಡಾಕ್ಟರ ಕೆ.ಎಂ.ಮೋಹನ್ ಕುಮಾರ್ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಧ್ವನಿ: ಡಾ. ಕೆ.ಎಂ ಮೋಹನಕುಮಾರ

<><><>

ಶೋಷಿತ ಸಮುದಾಯಗಳು, ಸಮಾಜದ ಮುಖ್ಯ ವಾಹಿನಿಗೆ ಬರಲು, ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ಅವರ, ಸನ್ಮಾರ್ಗಗಳನ್ನು ಅನುಸರಿಸಬೇಕೆಂದು, ಲೋಕೋಪಯೋಗಿ ಖಾತೆ ಸಚಿವ ಸತೀಶ್ ಜಾರಕಿಹೊಳಿ, ಹೇಳಿದರು. ಮಂಡ್ಯದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ, ಬೌದ್ಧ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು, ಮಾತನಾಡಿದರು.

ಬಾಬಾಸಾಹೇಬರ ದಯದಿಂದ ಮತ್ತು ಸಂವಿಧಾನದ ಬಲದಿಂದ, ಹಲವು ಶೋಷಿತ ಸಮುದಾಯಗಳು, ಗೌರವದಿಂದ ಬದುಕುವಂತಾಗಿದೆ. ಜೀತ ವಿಮುಕ್ತಗೊಂಡಿವೆ. ಅವರ ಆಶಯಕ್ಕೆ ತಕ್ಕಂತೆ, ಮೌಲ್ಯಯುತ ಜೀವನ ನಡೆಸುವಂತಾಗಲಿ ಎಂದು, ಆಶಿಸಿದರು.

<><><>

ಸಂಗೀತ ಕ್ಷೇತ್ರಕ್ಕೆ ವಿಶೇಷ ಕೊಡುಗೆಗಳನ್ನು ನೀಡಿದ ಭಾರತರತ್ನ ಪಂಡಿತ ಭೀಮಸೇನ ಜೋಶಿ, ಡಾಕ್ಟರ್ ಮಲ್ಲಿಕಾರ್ಜುನ ಮನಸೂರ, ಡಾಕ್ಟರ್ ಗಂಗೂಬಾಯಿ ಹಾನಗಲ್, ಡಾಕ್ಟರ್ ಬಸವರಾಜ ರಾಜುಗುರು ಮೊದಲಾದ ಕಲಾ ಸಾಧಕರಿಂದ ದೇಶದ ಸಂಗೀತ ಕ್ಷೇತ್ರವು ಶ್ರೀಮಂತಗೊಂಡಿದೆ ಎಂದು ಹಿರಿಯ ಕಲಾ ಪೋಷಕಿ ಪೂರ್ಣಿಮಾ ಬಾಗೇವಾಡಿ ಹೇಳಿದರು. ಧಾರವಾಡ ನಗರದ ಬೇಂದ್ರೆ ಭವನದಲ್ಲಿ, ಸ್ವರ ಸಂವಾದಿನಿ ಸಂಗೀತ ಶಾಲೆಯ, ಸಂಗೀತ ಶಿಬಿರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಸಂಗೀತವು ಲಯಬದ್ಧ ಶಬ್ದಗಳ ಜೋಡಣೆಯಿಂದ ಉತ್ಪತ್ತಿಯಾಗುವ ಜಾಗತಿಕ ಭಾಷೆಯಾಗಿದೆ ಎಂದರು.

<><><>

ಕಾಶ್ಮೀರದ ಪಹಲ್ಗಾಮ್ ನಲ್ಲಿ ನಡೆದ, ಭಯೋತ್ಪಾದಕರ ದಾಳಿ ಖಂಡಿಸಿ ಹಾಗೂ ಮಡಿದ ಪ್ರವಾಸಿಗರ ಆತ್ಮಕ್ಕೆ ಶಾಂತಿ ಕೋರಿ, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ವತಿಯಿಂದ, ಇಂದು ಸಂಜೆ 7 ಗಂಟೆಗೆ ಸಂಸ್ಥೆ ಆವರಣದಿಂದ, ವಿವೇಕಾನಂದ ಸರ್ಕಲ್‌ವರೆಗೆ 'ಮೇಣದ ಬತ್ತಿ' ಹಿಡಿದು ಮೌನ ಪ್ರತಿಭಟನಾ ನಡಿಗೆ ಆಯೋಜಿಸಲಾಗಿದೆ.

<><><>

ಚಿಕ್ಕಮಗಳೂರು ಜಿಲ್ಲೆ, ಕುದುರೆಮುಖ ವನ್ಯಜೀವಿ ವಿಭಾಗ ಹಾಗೂ ಚಾರಣ ಸ್ಥಳಗಳಿಗೆ, ಮೇ 1 ರಿಂದ ಅವಕಾಶ ಕಲ್ಪಿಸಲಾಗಿದೆ. ಜಾಲತಾಣ aranya vihara.karnataka.gov.in ನಲ್ಲಿ ಹೆಸರು ನೊಂದಾಯಿಸಿ, ಭೇಟಿ ನೀಡಬಹುದು.

<><><>

ಉತ್ತರ ಕರ್ನಾಟಕದ ಭಾಗದಲ್ಲಿ, ಪಡಿತರ ಅಕ್ಕಿ ಜೊತೆ ಜೋಳ ನೀಡುವ ಉದ್ದೇಶ ಪೂರ್ಣಪ್ರಮಾಣದಲ್ಲಿ ಪೂರೈಸಲು ಸಾಧ್ಯವಾಗದ ಕಾರಣ, ಹೆಚ್ಚುವರಿ ಒಂದು ಲಕ್ಷ ಟನ್ ಪೂರೈಸಲು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಗಿದೆ ಎಂದು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವ ಕೆ. ಎಚ್. ಮುನಿಯಪ್ಪ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರದಿಂದ ಪೂರೈಕೆಯಾದ ಬಳಿಕ ಪ್ರತಿ ಪಡಿತರ ಚೀಟಿಗೆ ಎರಡು ಕಿಲೋಗ್ರಾಂ ಜೋಳ ನೀಡಲಾಗುವುದು ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>